1. ಬಡುಗಳ ನಿರ್ಮಾಣ.
2. ಸಸ್ಯ ಬದುಗಳ ನಿರ್ಮಾಣ.
3. ಕೊರಕಲು ತಡೆಗಳು.
4. ನೀರು ಸಂಗ್ರಹಣಾ ವಿನ್ಯಾಸಗಳಾದ ಕೃಷಿ ಹೊಂಡ ನಾಲಾ ಬದು, ವೆಂಟಿಂಡ್ ಡ್ಯಾಂ, ಆರ್.ಆರ್.ಎಸ್.ಗಳ ನಿರ್ಮಾಣ.
5. ತಿರುವುಗಾಲುವೆಗಳು.
6. ನೀರು ದಾರಿಗಳ ರಚನೆ.

ಈ) ಮೇಲ್ಕಾಣಿಸಿದ ಕಾಮಗಾರಿಗಳಿಂದಾಗಿ ಕಳೆದ ಒಂದು ದಶಕದಲ್ಲಿ ಆದ ವೆಚ್ಚ ರೂ. 16,331.39 ಲಕ್ಷಗಳು. 1992-93ನೇ ಸಾಲಿನಲ್ಲಿ 3184.12 ಲಕ್ಷ ರೂ.ಗಳನ್ನು ವೆಚ್ಚ ಮಾಡುವ ಗುರಿಯಿರುತ್ತದೆ.

<u>ವಿಷಯ : ರಾಷ್ಟ್ರೀಯ ಹಾಗೂ ರಾಜ್ಯ ಬೀಜ ನಿಗಮದಿಂದ ರೈತ ಸಮುದಾಯಕ್ಕೆ ಅನುಕೂಲವಾಗಿರುವ ಬಗ್ಗೆ.</u>

Q: 169

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹಾಗೂ ರಾಜ್ಯ ಬೀಜ ನಿಗಮಗಳಿಂದ ರಾಜ್ಯದ ರೈತ ಸಮುದಾಯಕ್ಕೆ ಅನುಕೂಲವಾಗಿದೆಯೇ?
ಆ) ರಾಷ್ಟ್ರೀಯ ಬೀಜ ನಿಗಮ ಹಾಗೂ ರಾಜ್ಯ ಬೀಜ ನಿಗಮಗಳಿರುವ ವ್ಯತ್ಯಾಸಗಳೇನು?
ಇ) ಈ ಎರಡೂ ಬೀಜ ನಿಗಮಗಳನ್ನು ಒಂದು ಮಾಡಲು ಸರ್ಕಾರ ಆಲೋಚಿಸಿದೆಯೇ, ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಹೆಚ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಹೌದು. ಎರಡು ಬೀಜ ನಿಗಮಗಳು ಪ್ರಮಾಣೀಕರಿಸಿದ ಬಿತ್ತನೆ ಬೀಜಗಳನ್ನು ರೈತರಿಗೆ ಪೂರೈಸುತ್ತಿದ್ದು, ಹೆಚ್ಚಿನ ಕೃಷಿ ಉತ್ಪಾದನೆಗೆ ಸಹಕರಿಸುತ್ತಿದೆ.
ಆ) ರಾಷ್ಟ್ರೀಯ ಬೀಜ ನಿಗಮವು ಕೇಂದ್ರ ಸರ್ಕಾರದ ಅಂಗ ಸಂಸ್ಥೆಯಾಗಿದ್ದು ದೇಶದಾದ್ಯಂತ ಬೀಜೋತ್ಪಾದನೆ ಹಾಗೂ ವಿತರಣೆಯನ್ನು ಮಾಡುತ್ತಿದೆ. ಆದರೆ, ರಾಜ್ಯ ಬೀಜ ನಿಗಮವು ಕರ್ನಾಟಕ ರಾಜ್ಯದ ಅಂಗ ಸಂಸ್ಥೆಯಾಗಿದ್ದು, ಬೀಜೋತ್ಪಾದನೆ ಹಾಗೂ ವಿತರಣೆಯು ಮುಖ್ಯವಾಗಿ ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿರುತ್ತದೆ.
ಇ) ಇಲ್ಲ.

<u>ವಿಷಯ : ರಾಜ್ಯದಲ್ಲಿ ಆರಾಧನಾ ಯೋಜನೆಯಡಿಯಲ್ಲಿ ದುರಸ್ತಿಸಲಾದ ದೇವಸ್ಥಾನಗಳ ಸಂಖ್ಯೆ.</u>

Q: 363

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಆರಾಧನಾ ಯೋಜನೆಯ ಕೆಳಗೆ ಎಷ್ಟೆಷ್ಟು ದೇವಸ್ಥಾನಗಳನ್ನು ದುರಸ್ತಿಗೊಳಿಸಲಾಗಿದೆ. ನವೀಕರಿಸಲಾಗಿದೆ ಹಾಗೂ ಹೊಸದಾಗಿ ನಿರ್ಮಿಸಲಾಗಿದೆ?

ಆ) ಇದಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು? (ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಡುವುದು)

ಇ) ಈ ಯೋಜನೆಯು ದುರ್ಬಲ ವರ್ಗದವರು ವಾಸಿಸುವ ಸ್ಥಳಗಳಲ್ಲಿ ಸಮುದಾಯ ಭವನ ಮತ್ತು ಪಾಠಶಾಲೆಗಳ ಕೊಠಡಿ ಕಟ್ಟಿಸುವುದು ಸೂಕ್ತವಲ್ಲವೇ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು) :

ಅ) ದೇವಾಲಯಗಳ

ದುರಸ್ತಿ : ನವೀಕರಿಸುವುದು	-	357
ಪ್ರಗತಿಯಲ್ಲಿರುವುದು	-	1870
ಹೊಸದಾಗಿ ನಿರ್ಮಿಸಿರುವುದು	-	58
ಪ್ರಗತಿಯಲ್ಲಿರುವುದು	-	532

ಆ) ರೂ. 1,87,34,765-00
(ಪಟ್ಟಿ ಲಗತ್ತಿಸಿದೆ)

ಇ) ಆರಾಧನಾ ಯೋಜನೆಯಡಿ ಈ ರೀತಿಯ ಕಾಮಗಾರಿಗಳಿಗೆ ಅವಕಾಶವಿಲ್ಲ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆ	ವೆಚ್ಚವಾಗಿರುವ ಮೊತ್ತ	ಜಿಲ್ಲಾ ಮಟ್ಟದಲ್ಲಿ ಮಂಜೂರಾದ ಒಟ್ಟು ಕಾಮಗಾರಿ	ದುರಸ್ತಿ: ನವೀಕರಣ		ಹೊಸದಾಗಿ ಕಟ್ಟಿರುವುದು	
				ಪೂರ್ಣ	ಪ್ರಗತಿ	ಪೂರ್ಣ	ಪ್ರಗತಿ
1	2	3	4	5	6	7	8
1.	ಬೆಂಗಳೂರು (ನಗರ)	3,19,400-00	175	-	175	-	-
2.	ಬೆಂಗಳೂರು (ಗ್ರಾಮಾಂತರ)	3,46,807-00	137	22	17	15	83
3.	ಬೆಳಗಾಂ	14,77,105-00	137	17	98	3	19
4.	ಬಳ್ಳಾರಿ	5,12,760-00	159	-	-	10	149
5.	ಬೀದರ್	6,82,855-00	30	-	28	-	2
6.	ಬಿಜಾಪುರ	27,05,905-00	147	42	74	14	17
7.	ಚಿಕ್ಕಮಗಳೂರು	6,82,100-00	215	-	215	-	-
8.	ಚಿತ್ರದುರ್ಗ	6,82,912-00	123	14	77	-	32

9. ದಕ್ಷಿಣ ಕನ್ನಡ	20,44,800-00	162	11	143	-	8
10. ಧಾರವಾಡ	30,41,136-00	283	151	126	1	5
11. ಗುಲ್ಬರ್ಗಾ	3,22,000-00	175	-	110	-	65
12. ಹಾಸನ	2,94,950-00	93	-	66	-	27
13. ಕೊಡಗು	1,57,223-00	22	9	13	-	-
14. ಕೋಲಾರ	20,98,800-00	130	-	85	-	45
15. ಮಂಡ್ಯ	9,70,212-00	112	58	54	-	-
16. ಮೈಸೂರು	7,75,550-00	93	-	26	11	56
17. ರಾಯಚೂರು	1,81,364-00	287	19	256	-	9
18. ಶಿವಮೊಗ್ಗ	2,44,867-00	185	12	173	-	-
19. ತುಮಕೂರು	69,340-00	118	-	118	-	-
20. ಉತ್ತರ ಕನ್ನಡ	11,24,679-00	34	2	18	4	15
ಒಟ್ಟು	1,87,34,765-00	2817	357	1870	58	532

ವಿಷಯ : ಬಳ್ಳಾರಿ ಜಿಲ್ಲೆಯಲ್ಲಿನ ಅತಿವೃಷ್ಟಿಯಿಂದ ಬೆಳೆ ನಾಶವಾಗಿರುವುದು.

Q: 662

ಶ್ರೀ ಕೆ. ವಿ. ರವೀಂದ್ರನಾಥಬಾಬು (ಕೊಟ್ಟೂರು) : ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಳ್ಳಾರಿ ಜಿಲ್ಲೆಯಲ್ಲಿನ ಇತ್ತೀಚಿನ ಪ್ರವಾಹ ಅತಿವೃಷ್ಟಿಯಿಂದ ಬೆಳೆ ನಾಶವಾದ ಪರಿಣಾಮವಾಗಿ ಸಂಘಗಳ ಮತ್ತು ರೈತರ ಸಾಲ ವಸೂಲಾತಿಯನ್ನು ಮುಂಬರುವ ಆರ್ಥಿಕ ವರ್ಷದ ಸುಗ್ಗಿಯ ಕಾಲಕ್ಕೆ ಮುಂದೂಡಲು ಸರ್ಕಾರ ಯೋಚಿಸಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಪ್ರಕೃತಿ ವಿಕೋಪದಿಂದ ಬೆಳೆ ಹಾನಿಯಾದ ಪ್ರದೇಶಗಳಲ್ಲಿನ ರೈತರು ಸಹಕಾರ ಸಂಘಗಳಿಂದ ಪಡೆದ ಅಲ್ಪಾವಧಿ ಬೆಳೆ ಸಾಲವನ್ನು ಕೆಲವೊಂದು ಶರತ್‌ಗಳಿಗೆ ಒಳಪಟ್ಟು ಮಧ್ಯಮಾವಧಿ ಕಾಲವನ್ನಾಗಿ ಪರಿವರ್ತಿಸಲು ಕೃಷಿ ಸಹಕಾರ ಸಂಸ್ಥೆಗಳಿಗೆ ಅವಕಾಶವಿರುತ್ತದೆ. ಈ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರ ಬಳ್ಳಾರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ; ಹೊಸಪೇಟೆಯೂ ಸೇರಿದಂತೆ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳಿಗೆ ಸೂಕ್ತ ನಿರ್ದೇಶನ ನೀಡಿರುತ್ತದೆ. ಆದ್ದರಿಂದ ರೈತರ ಬಾಕಿ ಸಾಲ ವಸೂಲಾತಿಯನ್ನು ಮುಂಬರುವ ಆರ್ಥಿಕ ವರ್ಷದ ಸುಗ್ಗಿಯ ಕಾಲದವರೆಗೆ ಮುಂದೂಡಲು ಸರ್ಕಾರ ಯೋಚಿಸಿರುವುದಿಲ್ಲ.